

# ನಕ್ಕುಬಿಡಿ

## ನಿಮ್ ಅಪ್ಪ ತೊಳೆತಾರಾ?

ಗಂಡ: ಇದೇನೇ ಇನ್ನೂ ಒಂದು ದಿನದ ತಪಸ್ಸು ಮಾಡಿಲ್ಲ ಆಗ್ಲೇ ಮನೆಗೆ ಕರೆಯೋಕೆ ಬಂದ್ಯಾ. ನಿನಗೆ ಮಾಡೋಕೆ ಬೇರೆ ಕೆಲ್ಸಗಿಲ್ಸ ಇಲ್ವಾ?
ಹೆಂಡತಿ: ಈ ಕೊರೊನಾ ಬಂದಿದ್ದಕ್ಕೆ ನಿಮಗೇ ಮಾಡೋಕೆ ಕೆಲ್ಸ ಇಲ್ಲಾಂತ ತಪಸ್ಸಿಗೆ ಕೂಡೋ ನಾಟ್ಕಗೀಟ್ಕಾ ಮಾಡ್ಬೇಡಿ ನಡೀರಿ ಮನೆಗೆ ರಾಶಿಗಟ್ಲೇ ಬಟ್ಟೆಪಾತ್ರೆ ಬಿದ್ದಿವೆ. ಅವ್ನೇನ್ ನಿಮ್ಮ ಅಪ್ಪ ಬಂದು ತೊಳೆತಾರಾ!

***

## ಮಾವನ ಮರ್ಯಾದೆ!

ವರ: ನಾನು ಬಡ್ಕೊಂಡೆ ಇವಾಗ ಮದ್ವೆ ಬೇಡಾಂತ. ನನ್ ಮಾತು ಒಬ್ರಾದ್ರೂ ಕೇಳಿದ್ರಾ?
ತಂದೆ: ಯಾಕೋಪಾ ಏನಾಯಿತೀಗ?
ವರ: ಸಾಮಾಜಿಕ ಅಂತರ ಅಂತ ದೂರದಿಂದಲೇ ಅಳಿಯನ ಕಾಲು ತೊಳೆದು ಕನ್ಯಾದಾನ ಮಾಡ್ತಿರೋ ಮಾವನ ಮರ್ಯಾದೆ ಸಹಿಸೋಕೆ ಆಗ್ತಿಲ್ಲ ಅಪ್ಪಾ...

***

## ಹೆಂಡತಿ ಪ್ರೀತಿ!

ರವಿ: ಒಬ್ಬ ಸ್ತ್ರೀ ತನ್ನ ಪತಿಯನ್ನು ಹೆಚ್ಚು ಪ್ರೀತಿಸ್ತಾಳೋ ಅಥವಾ ತನ್ನ ಮಕ್ಕಳನ್ನು ಹೆಚ್ಚು ಪ್ರೀತಿಸ್ತಾಳೋ?!
ಗುಂಡ: ತನ್ನ ಪತಿಯನ್ನು
ರವಿ: ಅದ್ಹೇಗೆ ಹೇಳ್ತೀಯಾ?
ಗುಂಡ: ಪ್ರಸಂಗ ಬಂದ್ರೆ ತನ್ನ ಮಕ್ಕಳನ್ನು ಪಕ್ಕದ ಮನೆಯಲ್ಲಿ ಬಿಟ್ಟು ಹೋಗುತ್ತಾಳೆ. ಆದರೆ, ತನ್ನ ಗಂಡನನ್ನು ಬಿಟ್ಟು ಹೋಗೋದಿಲ್ಲ!

***



## ಲಾಕ್‌ಡೌನ್ ಎಫೆಕ್ಟ್!

ರಮಾ: ಏನ್ರೀ... ನೋಡಿದ್ರಾ... ಪಕ್ಕದ್ಮನೆ ಲಕ್ಷ್ಮೀ ಗಂಡ ವಿಚಿತ್ರವಾಗಿ ಕಾಣ್ತಾನೆ ಕಣ್ರೀ... ಅವಳಾದರೂ ಗಂಡನಿಗೆ ಹೇಳ್ಬಾರ್ದಾ..
ವಿಮಲಾ: ಯಾಕ್ರೀ ಏನಾಯ್ತು?!
ರಮಾ: ಹೆಣ್ಮಕ್ಳು ಥರಾ ಜಡೆ ಹಾಕೋಂಡು ಸುತ್ತಾಡ್ತಾನೆ ಕಣ್ರೀ..
ವಿಮಲಾ: ಅಯ್ಯೋ! ಅದಾ ! ಲಾಕ್ ಡೌನ್ ಅಲ್ವೇನ್ರೀ... ಕಟಿಂಗ್ ಶಾಪ್ ತೆರೆದಿಲ್ಲ. ಅದ್ಕೇ ಆ ಲಕ್ಷ್ಮೀಯೇ ಗಂಡ ಅಚ್ಚುಕಟ್ಟಾಗಿ ಕಾಣಲಿ ಅಂತ ಜಡೆ ಹಾಕ್ತಾಳೆ ಕಣ್ರೀ. ಹೆದರೋ ಅಂಥದ್ದೇನಿಲ್ಲ ಬಿಡಿ.

***

## ಕುಕ್ಕರ್‌ಗೆ ಹಾಕಿ

ರಮಾ: ಡಾಕ್ಟ್ರೇ.... ನಮ್ಮೆಜಮಾನರು ಬ್ಯಾಂಕಿನಿಂದ ಬರ್ತಾರೆ, ಚಪ್ಪಲಿ, ಬಟ್ಟೆಯನ್ನು ಹೊರಗೇ ತೆಗೆಸ್ತೀನಿ, ಡೆಟಾಲ್‌ನಿಂದ ಮೈ ಪೂರ್ತಿ ಕ್ಲೀನ್ ಮಾಡ್ಸಿ ಸ್ನಾನ ಮಾಡಿಸ್ತೀನಿ. ಬಿಸಿ ನೀರಿನಲ್ಲಿ ನಿಂಬೆರಸ ಹಾಕಿ ಬಾಯಿ ಮುಕ್ಕಳಿಸೋಕೆ ಹೇಳ್ತೀನಿ, ಹಾಗೆಯೇ ಸ್ಯಾನಿಟೈಸರ್ ಹಾಕಿ ಕೈಕಾಲು ಕ್ಲೀನ್ ಮಾಡಿಸ್ತೀನಿ. ಇಷ್ಟು ಸಾಕಾ ಇನ್ನೂ ಏನಾದ್ರೂ ಮಾಡ್ಲ...?
ಡಾಕ್ಟರ್: ಇನ್ನೂ ಬೇಕಂದ್ರೆ ಕುಕ್ಕರ್‌ನಲ್ಲಿ ಹಾಕಿ ಮೂರು ಸೀಟಿ ಹೊಡೆಸಿ ಬಿಡಮ್ಮ...!

***

## ಜನನ ಪ್ರಮಾಣಪತ್ರ ರದ್ದು!

ಲಾಕ್ ಡೌನ್ ಬ್ರೇಕಿಂಗ್ ನ್ಯೂಸ್!
ಸರ್ಕಾರವು ಜನವರಿ 2021 ಮತ್ತು ಫೆಬ್ರುವರಿ 2021ರಲ್ಲಿ ಜನಿಸುವ ಮಕ್ಕಳಿಗೆ ಜನನ ಪ್ರಮಾಣ ಪತ್ರ ಕೊಡುವುದನ್ನು ರದ್ದುಗೊಳಿಸುತ್ತಿದೆ.
ಕಾರಣ: ಪಾಲಕರು ಸರಿಯಾದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೇ ಇರುವುದು!

***

## ಮಾಸ್ಕ್ ತೆಗೆದು ಕುಡೀರಿ!

ಗಂಡ: ಇದೆಂಥ ಪಾಯಸ ಮಾಡಿದ್ದೀಯೇ? ಬರಿ ಹಾಲು ಬಾಯೊಳಗೆ ಬರುತ್ತಿದೆ, ರವೆ, ಬೇಳೆ ಬಟ್ಟಲಿನಲ್ಲಿಯೇ ಉಳಿತಿದೆ...
ಹೆಂಡತಿ: ಬಾಯಿಗೆ ಹಾಕಿಕೊಂಡಿರೋ ಮಾಸ್ಕ್ ತೆಗೆದು ಕುಡೀರಿ.

***

## ಟ್ಯೂಷನ್‌ಗೆ ಬಾ!

ರವಿ: ಬಾಳೆಹಣ್ಣಿನಿಂದ ಅನಾನಸ್ ಮಾಡೋದು ಹೇಗೆ?
ಗುಂಡ: Bananas ದಿಂದ B ತೆಗೆಯಿರಿ. ಲಾಕ್‌ಡೌನ್‌ನಿಂದ ಮನೇಲೇ ಕುಂತು ಕುಂತು ಈ ಥರಾ ಫಾಲ್ತು ವಿಚಾರ ನಂಗೆ ಬಹಳ ಬರ್ತಿವೆ;. ಟ್ಯೂಷನ್‌ಗೆ ಬಾ ನಿಂಗೆ ಇನ್ನೂ ಜಾಸ್ತಿ ಹೇಳಿಕೊಡ್ತೀನಿ.

***

## ಕೊರೊನಾ ತಡೆ ಹೇಗೆ

ರವಿ: ಕರೊನಾ ಬರದಂತೆ ತಡೆಯಲು ಏನು ಮಾಡಬೇಕು?
ಗುಂಡ: SMS ಸರಿಯಾಗಿ ಮಾಡಬೇಕು.
ರವಿ: ಏನಿದು ತಲೆಹರಟೆ ಉತ್ತರ?!
ಗುಂಡ: ಸೋಪ್/ಸ್ಯಾನಿಟೈಸರ್ (S), ಮಾಸ್ಕ್(M),ಸೋಷಿಯಲ್ ಡಿಸ್ಟೆನ್ಸ್(S).

***

## ಚಪಾತಿ ರೌಂಡಾಗಿಲ್ಲ!

ರವಿ: ಲಾಕ್‌ಡೌನ್ ಅವಧಿಯನ್ನು ಮತ್ತೆ ವಿಸ್ತರಿಸಲಾಗಿದೆಯಂತೆ ಕಣೋ...
ಗುಂಡ: ಯಾಕಂತೋ?!
ರವಿ: ಇನ್ನೂ ಕೆಲವು ಗಂಡಸರ ರೊಟ್ಟಿ, ಚಪಾತಿಯ ಆಕಾರ ಪೂರ್ತಿ ವೃತ್ತಾಕಾರ ಆಗಿಲ್ವಂತೆ ಅದ್ಕೇ!

(ಸಂಗ್ರಹ) ಹನುಮಂತ ಭಟ್. ಬಿ, ಬೆಂಗಳೂರು


